FRIDAY 13.06.2025 Pg.01

ಜೂನ್ 14, 15 ರಂದು 2 ದಿನಗಳ 'ಮಾವು ಮೇಳ'

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಾಗೂ ತೋಟಗಾರಿಕೆ ಇಲಾಖೆ ಆಶ್ರಯದಲ್ಲಿ ಜೂ.14 ಮತ್ತು 15 ರಂದು ನಗರದಲ್ಲಿ ಮಾವು ಮೇಳ ಆಯೋಜಿಸಿದೆ. ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜು ಆವರಣದಲ್ಲಿರುವ ಅಲುಮ್ನಿ ಅಸೋಸಿಯೇಷನ್‌ನಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆ ವರೆಗೂ ಎರಡು ದಿವಸ ಮಾವು ಮೇಳ ಹಮ್ಮಿಕೊಳ್ಳಲಾಗಿದೆ. ರೈತರು ತಾವು ಬೆಳೆದ ಮಾವಿನ ಹಣ್ಣುಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಿದ್ದಾರೆ. ಇದರಿಂದ ರೈತರು ಮತ್ತು ಗ್ರಾಹಕರಿಗೂ ಅನುಕೂಲವಾಗಲಿದೆ. ಹೆಚ್ಚಿನ ಮಾಹಿತಿಗೆ ಮೊ: 93428 86075 ಸಂಪರ್ಕಿಸಬಹುದು ಎಂದು ಸಂಘದ ಪ್ರಕಟಣೆ ತಿಳಿಸಿದೆ.

KannadaPrabha Pg.04

ಜಿಕೆವಿಕೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ತರಬೇತಿ ಕಾರ್ಯಾಗಾರ

ಕೃಷಿ ನವೋದ್ಯಮಗಳನ್ನು ಪ್ರೋತ್ಸಾಹಿಸಲು ಕಾರ್ಯಕ್ರಮ: ಜಿ.ಟಿ.ಪುತ್ರ



ಜಿಕೆವಿಕೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರಿಗೆ ತರಬೇತಿ ಕಾರ್ಯಾಗಾರ ನಡೆಯಿತು.

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ವಲಯದಲ್ಲಿ ಆದಾಯ ಗಳಿಕೆಯ ಹಲವು ಉದ್ಯಮಶೀಲತೆ ಅವಕಾಶ ಗಳಿದ್ದು, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿ.ಟಿ.ಪುತ್ರ ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಅಗ್ರಿ ಇನ್ನೋವೇಷನ್ ಸೆಂಟರ್ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ 'ಕೃಷಿ-ವೇಗವರ್ಧಕ ವೇದಿಕೆ ಮೂಲಕ ಕೃಷಿ ನವೋದ್ಯಮಗಳನ್ನು ಪ್ರೋತ್ಸಾಹಿಸಿ ರೈತ ಉತ್ಪಾದಕ ಸಂಸ್ಥೆಗಳನ್ನು(ಎಫ್‌ಪಿಒ) ಬಲಪಡಿಸುವ ನಿಟ್ಟಿನಲ್ಲಿ ಏರ್ಪಡಿಸಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿಯಲ್ಲಿ ಸುಧಾರಿತ ಹೊಸ ತಂತ್ರಜ್ಞಾನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ರೈತರು ತಮ್ಮದೇ ಬ್ರ್ಯಾಂಡಿಂಗ್ ಮೂಲಕ ಕೃಷಿ ಬೆಳೆಯನ್ನು ಸಂಸ್ಕರಣೆ ಮಾಡಿ, ಮೌಲ್ಯವರ್ಧನೆಗೊಳಿಸಿದ್ದಲ್ಲಿ ರೈತರು ಹೆಚ್ಚು ಲಾಭಗಳಿಸಲು ಸಾಧ್ಯವಾಗಲಿದೆ. ಅದಕ್ಕೆ ಬೇಕಾದ ಸಾಲಸೌಲಭ್ಯವನ್ನು ಬ್ಯಾಂಕ್‌ಗಳು ಒದಗಿಸಲಿವೆ ಎಂದರು.

ಕೃಷಿಯನ್ನು ಉದ್ಯಮಶೀಲತೆವಾಗಿಸುವ ನಿಟ್ಟಿನಲ್ಲಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ರೈತರು ಇವುಗಳ ಬಗ್ಗೆ ಸಮಗ್ರ ಮಾಹಿತಿ ತಿಳಿದುಕೊಳ್ಳಬೇಕು. ಈ ನಿಟ್ಟಿನಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಬಲವರ್ಧನೆಗೊಳ್ಳಬೇಕು ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯ ಸಂಶೋಧನಾ ನಿರ್ದೇಶಕ ಡಾ.ಎಚ್.ಎನ್.ಶಿವರಾಮು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತೋಟಗಾರಿಕಾ ಇಲಾಖೆ ಉಪ ನಿರ್ದೇಶಕಿ ಕ್ಷಮಾ ಪಾಟೀಲ್, ಪ್ರಾಧ್ಯಪಕರಾದ ಡಾ.ಎಸ್. ವೀಣಾ, ಅನಿಲ್, ಹಾಗೂ ರಾಜ್ಯದ ವಿವಿಧ ಜಿಲ್ಲೆ ರೈತ ಉತ್ಪಾದಕ ಸಂಸ್ಥೆ ಪ್ರತಿನಿಧಿಗಳು ಹಾಗೂ ವಿಜ್ಞಾನಿಗಳು ಭಾಗವಹಿಸಿದ್ದರು.

Udayavani Pg.04

6 ವರ್ಷಗಳಲ್ಲೇ ಕನಿಷ್ಠ | ಗ್ರಾಹಕರು ನಿರಾಳ | ಬಡ್ಡಿ ದರ ಮತ್ತಷ್ಟು ಇಳಿಕೆ ನಿರೀಕ್ಷೆ

ಚಿಲ್ಲರೆ ಹಣದುಬ್ಬರ ದಾಖಲೆ ಇಳಿಕೆ

ಹೊಸದಿಲ್ಲಿ: ಕಳೆದ ಮೇ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಗಣನೀಯವಾಗಿ ಕುಸಿತ ದಾಖಲಿಸಿದ್ದು, ಶೇ.2.82ಕ್ಕೆ ಇಳಿದಿದೆ. ಇದು ಆರು ವರ್ಷಗಳಲ್ಲೇ ಕನಿಷ್ಠ. ತರಕಾರಿಗಳು, ಹಣ್ಣುಗಳು ಮತ್ತು ಪ್ರೊಟೀನ್ ಭರಿತ ಉತ್ಪನ್ನಗಳೂ ಸೇರಿದಂತೆ ಆಹಾರ ಪದಾರ್ಥಗಳ ಬೆಲೆ ಕಡಿಮೆಯಾದ ಹಿನ್ನೆಲೆಯಲ್ಲಿ ಹಣದುಬ್ಬರ ಕುಸಿದಿದೆ.

ಈ ವರ್ಷದ ಮೇ ತಿಂಗಳಲ್ಲಿ ಹಣದುಬ್ಬರ ಮತ್ತು ಆಹಾರ ಹಣದುಬ್ಬರದಲ್ಲಿ ಗಮನಾರ್ಹ ಕುಸಿತ ಕಂಡು ಬಂದಿದೆ. ಬೇಳೆ ಕಾಳುಗಳು, ತರಕಾರಿಗಳು, ಹಣ್ಣುಗಳು, ಧಾನ್ಯಗಳು, ಗೃಹೋಪಯೋಗಿ ಸರಕುಗಳು ಮತ್ತು ಸೇವೆಗಳು, ಸಕ್ಕರೆ ಮತ್ತು ಮಿಠಾಯಿ ಹಾಗೂ ಮೊಟ್ಟೆ ಬೆಲೆಯಲ್ಲಿ ಆಗಿರುವ ಗಮನಾರ್ಹ ಇಳಿಕೆಯು ಚಿಲ್ಲರೆ ಹಣದುಬ್ಬರದ ಇಳಿಕೆಗೆ ತಮ್ಮ ಕೊಡುಗೆ ನೀಡಿವೆ. ಮೇ ಮಾಸದಲ್ಲಿ



ಆಗಿರುವ ಹಣದುಬ್ಬರ ಇಳಿಕೆಯು ಅಕ್ಟೋಬರ್ 2021ರಿಂದೀಚೆಗೆ ಅತಿ ಕಡಿಮೆ ಎಂದು ದಾಖಲಾಗಿದೆ. ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಕಳೆದ ಏಪ್ರಿಲ್ (2025) ತಿಂಗಳಿನಲ್ಲಿ ಶೇ.3.16ರಷ್ಟಿತ್ತು. ಇದು ಕಳೆದ ವರ್ಷದ (2024) ಮೇ ತಿಂಗಳಿನಲ್ಲಿ ಶೇ.4.8ರಷ್ಟಿತ್ತು. ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿ (ಎನ್‌ಎಸ್‌ಒ) ಪ್ರಕಾರ, ಮೇ ತಿಂಗಳಲ್ಲಿ ಆಹಾರ ಹಣದುಬ್ಬರವು ಶೇ. 0.99 ರಷ್ಟಿತ್ತು. ಇದು ಹಿಂದಿನ ವರ್ಷದ ಶೇ.8.69ಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ. ಎನ್‌ಎಸ್‌ಒ ದತ್ತಾಂಶಗಳ ಪ್ರಕಾರ ಪ್ರಸಕ್ತ ವರ್ಷದ ಮೇನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಣದುಬ್ಬರ ಪ್ರಮಾಣ ಶೇ.2.59 ಇದ್ದರೆ ನಗರ ಪ್ರದೇಶಗಳಲ್ಲಿ ಶೇ.3.07ರಷ್ಟಿತ್ತು.

ಮತ್ತೆ ರೆಪೊ ದರ ಇಳಿಕೆ ನಿರೀಕ್ಷೆ: ಹಣದುಬ್ಬರ ದಿಢೀರ್ ಏರಿಕೆ ಕಾಣುವ ಸಾಧ್ಯತೆ ಇಲ್ಲ. ಏಕೆಂದರೆ ಹಿಂಗಾರು ಮತ್ತು ಮುಂಗಾರು ಇಳುವರಿ ಉತ್ತಮವಾಗಿದೆ. ಇದರಿಂದ ಆಹಾರ ಪದಾರ್ಥಗಳ ಬೆಲೆ ಏಕಾಏಕಿ ಹೆಚ್ಚಳವಾಗುವ ಸಂಭವ ತೀರಾ ಕಡಿಮೆ. ಹೀಗಾಗಿ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಆರ್‌ಬಿಐ ಹಣಕಾಸು ನೀತಿ ಸಭೆಯು ರೆಪೊ ದರವನ್ನು ಶೇ.0.25ರಷ್ಟು ಇಳಿಸಬಹುದು ಎನ್ನುವ ಲೆಕ್ಕಾಚಾರ ಶುರುವಾಗಿದೆ.

2.82% 2025ರ ಮೇ ತಿಂಗಳಲ್ಲಿ ದಾಖಲಾದ ಚಿಲ್ಲರೆ ಹಣದುಬ್ಬರ

2.57% 2019ರ ಫೆಬ್ರುವರಿಯಲ್ಲಿ ದಾಖಲಾಗಿರುವುದು ಇದುವರೆಗಿನ ಕನಿಷ್ಠ ಹಣದುಬ್ಬರ

4.00% 2025ರಲ್ಲಿ ಸತತ 4 ತಿಂಗಳಿನಿಂದ ಹಣದುಬ್ಬರ ದರ ಆರ್‌ಬಿಐ ನಿಗದಿಪಡಿಸಿದ ಶೇ.4 ಕ್ಕಿಂತಲೂ ಕಡಿಮೆ ಇದೆ

VijayaKannada Pg.09

ಕೆಎಸ್‌ಟಿಎಯಲ್ಲಿ ಕೃಷಿ ಆಧರಿತ ಡ್ರೋನ್ ಬಳಕೆ ಬಗ್ಗೆ ಕಾರ್ಯಾಗಾರ

ಕೃಷಿಯಲ್ಲಿ ತಂತ್ರಜ್ಞಾನ ಬಳಕೆಗೆ ಸರ್ಕಾರ ಉತ್ತೇಜನ: ಡಾ.ಎ.ಬಿ.ಪಾಟೀಲ್



ಕೆಎಸ್‌ಟಿಎಯಲ್ಲಿ ಕೃಷಿ ಆಧರಿತ ಡ್ರೋನ್ ಬಳಕೆ ಬಗ್ಗೆ ಕಾರ್ಯಾಗಾರ ಆಯೋಜಿಸಲಾಗಿತ್ತು.

■ ಉದಯವಾಣಿ ಸಮಾಚಾರ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್‌ಟಿಎ)ಯಲ್ಲಿ 'ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಮಾನವರಹಿತ ವೈಮಾನಿಕ ವಾಹನಗಳು ಮತ್ತು ಡ್ರೋನ್‌ಗಳ ಅನ್ವಯ' ವಿಷಯ ಕುರಿತು ಮೂರು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಕೃಷಿ ಸಚಿವರ ಸಲಹೆಗಾರ ಡಾ.ಎ.ಬಿ.ಪಾಟೀಲ್ ಚಾಲನೆ ನೀಡಿದರು.

ಬಳಿಕ ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆಯ ಬಗ್ಗೆ ಹಾಗೂ ಸರ್ಕಾರದಿಂದ ಪ್ರಸ್ತುತ ಕೃಷಿಯಲ್ಲಿ ಈ ತಂತ್ರಜ್ಞಾನದ ಬಳಕೆಗೆ ದೊರೆಯುತ್ತಿರುವ ಪ್ರೋತ್ಸಾಹದ ಬಗ್ಗೆ ವಿವರಿಸಿದರು.

ಗೋಬಲ್ ಗ್ರೀನ್ ಸ್ಮಿತ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಚಂದ್ರಶೇಖರ್ ಎಂ.ಬಿರಾದಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಡ್ರೋನ್ ತಂತ್ರಜ್ಞಾನ ನಡೆದು ಬಂದ ಹಾದಿಯ ಬಗ್ಗೆ ತಿಳಿಸಿಕೊಟ್ಟರು.

ಹೈದರಾಬಾದ್‌ನ ಎಂಎಎನ್‌ಜಿಇ ಸಂಸ್ಥೆಯ ಉಪನಿರ್ದೇಶಕ ಡಾ.ಭಾಸ್ಕರ್ ಗುಜ್ಜಿ ಅವರು, ಸಂಸ್ಥೆಯು ಡ್ರೋನ್ ತಂತ್ರಜ್ಞಾನದ ಬಗ್ಗೆ ನಡೆಸುತ್ತಿರುವ ತರಬೇತಿ ಕಾರ್ಯಕ್ರಮಗಳು ಹಾಗೂ ಭಾರತ ಸರ್ಕಾರದಿಂದ ಡ್ರೋನ್ ಬಳಕೆಗೆ ವಿವಿಧ ಯೋಜನೆಗಳಿಂದ ನೀಡುತ್ತಿರುವ ಪ್ರೋತ್ಸಾಹದ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ. ರಮೇಶ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಎಚ್. ಹೊನ್ನೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ವಿವಿಧ ವಿಶ್ವವಿದ್ಯಾಲಯಗಳ, ಪ್ರಾಧ್ಯಾಪಕರು ಹಾಗೂ ಸಂಶೋಧನ ವಿದ್ಯಾರ್ಥಿಗಳು ಸೇರಿದಂತೆ 50 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

Udayavani Pg.04

ಆಹಾರ ತಯಾರಿಕಾ ಸಾಮಗ್ರಿಗಳ ಬೃಹತ್ ಮೇಳಕ್ಕೆ ಚಾಲನೆ

ಬೆಂಗಳೂರು: ಅಡುಗೆಮನೆ ಪರಿಕರಗಳು ಒಂದೇ ವೇದಿಕೆಯಲ್ಲಿ ಪ್ರದರ್ಶನಗೊಂಡಿದ್ದು, ಆಹಾರೋದ್ಯಮ ನಡೆಸುವವರಿಗೆ ಒಳ್ಳೆಯ ಅವಕಾಶ ಸಿಕ್ಕಿದೆ ಎಂದು ಬೆಂಗಳೂರು ಹೋಟೆಲ್ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಹೇಳಿದರು.

ಪೀಣ್ಯ ದಾಸರಹಳ್ಳಿಯ ತುಮಕೂರು ರಸ್ತೆಯ ಬಿಐಇಸಿಯಲ್ಲಿ ಮೂರು ದಿನಗಳ ಅಂತಾರಾಷ್ಟ್ರೀಯ ಆಹಾರ ತಯಾರಿಕಾ ಸಾಮಗ್ರಿಗಳ ಬೃಹತ್ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಹೋಟೆಲ್ ಮತ್ತು ಬೇಕರಿ ವಲಯಕ್ಕೆ ಆಹಾರ ತಯಾರಿಕ ಸಾಮಗ್ರಿಗಳ ಬೃಹತ್ ಮೇಳ ಪೂರಕವಾಗಿದೆ. ಮಾಂಸಾಹಾರ, ಶಾಖಾಹಾರ ತಿಂಡಿ ತಿನಿಸುಗಳನ್ನು ಸುಲಭವಾಗಿ ತಯಾರಿಸಲು ಅತ್ಯಾಧುನಿಕ ತಂತ್ರಜ್ಞಾನ ಪೂರಕವಾಗಿದೆ.

ವಿದೇಶದಿಂದ ತಂತ್ರಜ್ಞಾನ, ಸಾಧನ ಸಲಕರಣೆ ತರಬೇಕಾಗಿತ್ತು. ಅದರೆ ವಿದೇಶ ಕಂಪನಿಗಳಿಗೆ ಪೈಪೋಟಿ ನೀಡುವಂತಹ ಕಂಪನಿಗಳು ನಮ್ಮಲ್ಲಿ ಇದೆ. ಸ್ವಯಂ ಉದ್ಯೋಗ ಮತ್ತು ನಿರುದ್ಯೋಗ ನಿವಾರಣೆಗಾಗಿ ಪ್ರಯೋಜನಕಾರಿಯಾಗಿದೆ ಎಂದರು.

ಮನುಷ್ಯ ಮಾಡುವ ಕೆಲಸಗಳನ್ನು ಬೃಹತ್ ಯಂತ್ರೋಪಕರಣಗಳು ಸುಲಭವಾಗಿ ಮಾಡುತ್ತಿದ್ದು, ಉದ್ಯಮ ಸ್ಥಾಪಿಸಲು ಬೇಕಾದ ಎಲ್ಲ ಮಾಹಿತಿ, ಸಲಕರಣೆ ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗಲಿದೆ. ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾಗಲು ಈ ಮೇಳ ಸಹಕಾರಿಯಾಗಿದೆ ಎಂದು ತಿಳಿಸಿದರು.

SamyukthaKannada Pg.07

ಕಿರು ಆಹಾರ ಸಂಸ್ಕರಣೆ ಉದ್ದಿಮೆ ಸ್ಥಾಪನೆಗೆ ಪ್ರೋತ್ಸಾಹ: ಸಚಿವ

ಉದ್ದಿಮೆ ಸ್ಥಾಪನೆಗೆ ₹206 ಕೋಟಿ ಮೀಸಲು | ಗರಿಷ್ಠ 15 ಲಕ್ಷ ರೂ.ವರೆಗೆ ನೆರವು | 'ಕೃಷಿ ಜಾಗೃತಿ' ಕಾರ್ಯಾಗಾರದಲ್ಲಿ ಚಲುವರಾಯಸ್ವಾಮಿ

■ ಉದಯವಾಣಿ ಸಮಾಚಾರ

ಬೆಂಗಳೂರು: ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ 206 ಕೋಟಿ ರೂ. ಮೀಸಲಿಡಲಾಗಿದ್ದು, ರೈತರು ಹಾಗೂ ನವೋದ್ಯಮಿಗಳು ಇದರ ಸದ್ಬಳಕೆ ಮಾಡಿಕೊಳ್ಳುವಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಟೌನ್‌ಹಾಲ್ ಸಭಾಂಗಣದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ(ಕೆಪೆಕ್) ಹಾಗೂ ಬೇತಿವಾಲ ಸಂಸ್ಥೆ ಸಹಯೋಗದಲ್ಲಿ ಗುರುವಾರ ಏರ್ಪಡಿಸಿದ್ದ 'ಕೃಷಿ ಜಾಗೃತಿ' ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ ಯುವಜನತೆ ಕೃಷಿಯತ್ತ ಒಲವು ತೋರುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಗೆ ಪರಿಹಾರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ(ಪಿಎಂಎಫ್ ಎಂಇ)ಯೋಜನೆ ಮೂಲಕ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆಗೆ ಉತ್ತೇಜಿಸುತ್ತಿದೆ. ಈ ಯೋಜನೆಯಡಿ ಕೇಂದ್ರದಿಂದ 6 ಲಕ್ಷ ರೂ. ಹಾಗೂ ರಾಜ್ಯ ಸರ್ಕಾರದಿಂದ 9 ಲಕ್ಷ ಸೇರಿ ಒಟ್ಟು 15 ಲಕ್ಷ ರೂ. ಸಹಾಯಧನ ದೊರೆಯಲಿದೆ ಎಂದರು.

ನವೋದ್ಯಮಿಗಳಿಗೆ ಉತ್ತೇಜನ ನೀಡುವುದರ ಜೊತೆಗೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ವ್ಯಾಪಾರ ಕ್ಷೇತ್ರಗಳು ಆಸರೆಯಾಗಿವೆ. ಇದರಿಂದಾಗಿ ಕೃಷಿ ಹಾಗೂ ಕೃಷಿ ಉತ್ಪನ್ನಗಳ ಮಾರುಕಟ್ಟೆ ವಹಿವಾಟು ವ್ಯವಸ್ಥೆಯಲ್ಲಿ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿದ್ದು ಸ್ವ-ಉದ್ಯೋಗಕ್ಕೂ ಅವಕಾಶವಾಗಲಿದೆ. ರೈತರು ಸಾಂಪ್ರದಾಯಕ ಕೃಷಿಯೊಂದಿಗೆ ತಂತ್ರಜ್ಞಾನ, ವೈಜ್ಞಾನಿಕ ಪದ್ಧತಿಗಳ ಅಳವಡಿಕೆ ಮಾಡಿಕೊಳ್ಳಬೇಕು. ಇದು ಸಮಯ, ಶ್ರಮದ ಉಳಿತಾಯದೊಂದಿಗೆ ಆದಾಯವನ್ನು ದ್ವಿಗುಣಗೊಳಿಸಲಿದೆ. ಮುಖ್ಯವಾಗಿ ತಮ್ಮ ಉತ್ಪನ್ನಗಳ ಮೌಲ್ಯವರ್ಧನೆಗೆ ಹೆಚ್ಚು ಆದ್ಯತೆ ನೀಡುವಂತೆ ತಿಳಿಸಿದರು.



ಟೌನ್‌ಹಾಲ್ ಸಭಾಂಗಣದಲ್ಲಿ ನಡೆದ 'ಕೃಷಿ ಜಾಗೃತಿ' ಕಾರ್ಯಾಗಾರವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಮಾತನಾಡಿ, ಇಳುವರಿ ಅಧಿಕವಾಗಿ ಕೆಲವೊಮ್ಮೆ ಬೆಲೆಕುಸಿತದಲ್ಲಿ ಏರುಪೇರಾದಾಗ ರೈತರಿಗೆ ಆರ್ಥಿಕವಾಗಿ ತೀವ್ರ ನಷ್ಟವಾಗಲಿದೆ. ಇದನ್ನು ತಪ್ಪಿಸಲು ಆಹಾರ ಸಂಸ್ಕರಣೆ ಮೂಲಕ ಕಿರು ಉದ್ದಿಮೆಗಳನ್ನು ಆರಂಭಿಸಿದ್ದಲ್ಲಿ ಹೆಚ್ಚು ಲಾಭಗಳಿಕೆಗೆ ಸಹಾಯಕವಾಗಲಿದೆ. 2026ರ ಮಾರ್ಚ್ ವೇಳೆಗೆ ಈ ಯೋಜನೆ ಕೊನೆಯಾಗಲಿದೆ ಎಂದು ಹೇಳಿದರು.

ಈ ಯೋಜನೆಯಡಿ 200ಕ್ಕೂ ಹೆಚ್ಚು ಆಹಾರ ಸಂಬಂಧಿತ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಯಾವುದೇ ಕನಿಷ್ಠ ವಿದ್ಯಾರ್ಹತೆ ಆಗತ್ಯವಿಲ್ಲ. ಬ್ಯಾಂಕ್ ಮೂಲಕ ಸಾಲ ಸೌಲಭ್ಯಗಳು ಸುಲಭವಾಗಿ ಸಿಗಲಿದೆ. 500 ಕೋಟಿ ರೂ.ವರೆಗೂ ವಹಿವಾಟು ಸಾಧ್ಯವಾಗಲಿದೆ ಎಂದು ಮಾಹಿತಿ ನೀಡಿದರು.

ಜಲಾನಯನ ಇಲಾಖೆ ನಿರ್ದೇಶಕ ಮಹ್ಮದ್ ಫರ್ವೇಜ್ ಬಂಥನಾಳ, ನರ್ಬಾಡ್ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಮಾತನಾಡಿದರು. ಇದೇ ವೇಳೆ ಬೇತಿ ಪುರಸ್ಕಾರಕ್ಕೆ ಭಾಜನರಾದ ಅಧಿಕಾರಿಗಳು ಹಾಗೂ ಸಂಸ್ಥೆಯ ಪ್ರತಿನಿಧಿಗಳನ್ನು ಸಚಿವರು ಸನ್ಮಾನಿಸಿದರು. ಎನ್‌ಬಿಐ ವ್ಯವಸ್ಥಾಪಕ ನಿರ್ದೇಶಕ ಎ.ಎನ್.ಶರ್ಮಾ ಮತ್ತು ಎನ್.ಎಲ್.ಬಿ.ಸಿ ಸಂಯೋಜಕ ಭಾನ್ಸರ್ ಭಟ್ಟಾಚಾರ್ಯ ಇದ್ದರು.

'ಈ ವರ್ಷ 5 ಸಾವಿರ ಹೊಸ ಆಹಾರ ಉದ್ಯಮ ಸ್ಥಾಪನೆ ಗುರಿ'

ಕೆಪೆಕ್‌ನಲ್ಲಿ ಈ ವರ್ಷದಲ್ಲಿ 5 ಸಾವಿರ ಹೊಸ ಆಹಾರ ಉದ್ಯಮಗಳನ್ನು ಸೃಷ್ಟಿಯ ಗುರಿ ಹೊಂದಲಾಗಿದೆ ಜೊತೆಗೆ ಕೃಷಿ ಇಲಾಖೆಯಲ್ಲಿ ಹಲವು ವಿನೂತನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕೃಷಿ ನವೋದ್ಯಮದಡಿ 8 ಕೋಟಿ ರೂ. ಸಹಾಯಧನದಲ್ಲಿ 40 ನವೋದ್ಯಮಗಳನ್ನು ಸ್ಥಾಪಿಸಲಾಗಿದೆ ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಹೇಳಿದರು.

Udayavani Pg.03

Prajavani Pg.10

ಆಹಾರ ವಸ್ತುಗಳ ಬೆಲೆ ಇಳಿಕೆ ಕಾರಣ: ಎನ್‌ಎಸ್‌ಒ ಮಾಹಿತಿ

ಹಣದುಬ್ಬರ 6 ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಏರಿಕೆಯು ಮಂದವಾಗಿ ಇದ್ದುದರ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇಕಡ 2.82ಕ್ಕೆ ತಗ್ಗಿದೆ. ಇದು ಆರು ವರ್ಷಗಳ ಕನಿಷ್ಠ ಮಟ್ಟ.



ಇದರೊಂದಿಗೆ, ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ನಾಲ್ಕು ತಿಂಗಳುಗಳಿಂದ ಆರ್‌ಬಿಐ ಮಿತಿಯಲ್ಲಿ (ಶೇ 4) ಉಳಿದಂತಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಏಪ್ರಿಲ್‌ನಲ್ಲಿ ಶೇ 3.16ರಷ್ಟು ಇತ್ತು. ಇದು ಹಿಂದಿನ ವರ್ಷದ ಮೇ ತಿಂಗಳಲ್ಲಿ ಶೇ 4.8ರಷ್ಟು ಇತ್ತು. ಈ ಬಾರಿಯ ಮೇ ತಿಂಗಳಲ್ಲಿ ದಾಖಲಾಗಿರುವುದು 2019ರ ಫೆಬ್ರುವರಿ ನಂತರದ ಕನಿಷ್ಠ ಮಟ್ಟ. ಹಣದುಬ್ಬರದ ಇಳಿಕೆಯನ್ನು ಗಮನಿಸಿ ಆರ್‌ಬಿಐ ರೆಪೊ ದರವನ್ನು ಶೇಕಡ 0.50ರಷ್ಟು ಕಡಿಮೆ ಮಾಡಿದೆ.

ಮೇ ತಿಂಗಳಲ್ಲಿ ಆಹಾರ ಪದಾರ್ಥಗಳ ಹಣದುಬ್ಬರ ಶೇ 0.99ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳಲ್ಲಿ ಹೇಳಲಾಗಿದೆ.

> ಆಗಸ್ಟ್‌ನಲ್ಲಿ ರೆಪೊ ಇಳಿಕೆಯಾಗುವ ನಿರೀಕ್ಷೆ ಇಲ್ಲ. ಆದರೆ, ತಗ್ಗಿದ ಹಣದುಬ್ಬರ ಹಾಗೂ ಆರ್ಥಿಕ ಬೆಳವಣಿಗೆ ಅಂದಾಜನ್ನು ಪರಿಗಣಿಸಿದಾಗ, ಅಕ್ಟೋಬರ್‌ನಲ್ಲಿ ರೆಪೊ ದರವನ್ನು ಶೇ 0.25ರಷ್ಟು ತಗ್ಗಿಸುವ ಸಾಧ್ಯತೆ ತಳ್ಳಿಹಾಕಲಾಗದು
>
> **ಅದಿತಿ ನಾಯರ್,** ಮುಖ್ಯ ಅರ್ಥಶಾಸ್ತ್ರಜ್ಞೆ, ಐಸಿಆರ್‌ಎ

'ದ್ವಿದಳ ಧಾನ್ಯಗಳು, ತರಕಾರಿಗಳು, ಹಣ್ಣುಗಳು, ಏಕದಳ ಧಾನ್ಯಗಳು, ಮನೆಬಳಕೆಯ ಉತ್ಪನ್ನಗಳು ಹಾಗೂ ಸೇವೆಗಳು, ಮೊಟ್ಟೆಯ ಬೆಲೆ ಏರಿಕೆಯಲ್ಲಿ ಇಳಿಕೆ ಆಗಿರುವುದು ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಕಡಿಮೆ ಆಗಿರುವುದಕ್ಕೆ ಮುಖ್ಯ ಕಾರಣ' ಎಂದು ಎನ್‌ಎಸ್‌ಒ ಪ್ರಕಟಣೆ ತಿಳಿಸಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು 75 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿರುವುದು ರೆಪೊ ದರ ಇಳಿಸಲು ಆರ್‌ಬಿಐ ಕೈಗೊಂಡ ತೀರ್ಮಾನವನ್ನು ಸಮರ್ಥಿಸುವಂತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಕೃಷಿ ಜಾಗೃತಿ ಕಾರ್ಯಾಗಾರದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ

ಕೃಷಿ, ವ್ಯಾಪಾರ ಕ್ಷೇತ್ರ: ನಿರುದ್ಯೋಗ ನಿವಾರಣೆ

ಪ್ರಜಾವಾಣಿ ವಾರ್ತೆ



ಖೆತಿ ಪುರಸ್ಕಾರಕ್ಕೆ ಭಾಜನರಾದವರನ್ನು ಕೃಷಿ ಜಾಗೃತಿ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು

ಬೆಂಗಳೂರು: ಕೃಷಿ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ವಹಿವಾಟು ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಈ ಕ್ಷೇತ್ರಗಳು ಆಸರೆಯಾಗಿವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೆಪೆಕ್ ಹಾಗೂ ಖೆತಿವಾಲ ಸಂಸ್ಥೆಗಳು ಗುರುವಾರ ಆಯೋಜಿಸಿದ್ದ ಕೃಷಿ ಜಾಗೃತಿ ಕಾರ್ಯಾಗಾರ ಮತ್ತು ಖೆತಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಪ್ರದಾಯಿಕ ಕೃಷಿಯೊಂದಿಗೆ ತಂತ್ರಜ್ಞಾನ, ವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡರೆ ಸಮಯ, ಶ್ರಮದ ಉಳಿತಾಯದ ಜೊತೆಗೆ ಆದಾಯ ಹೆಚ್ಚುತ್ತದೆ. ರೈತರು ತಮ್ಮ ಉತ್ಪನ್ನಗಳ ಮೌಲ್ಯವರ್ಧನೆಗೂ ಆದ್ಯತೆ ನೀಡಬೇಕು. ಮಾರುಕಟ್ಟೆಯ ಬಗ್ಗೆ ಜ್ಞಾನ ವಿಸ್ತಾರಗೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪೆಕ್‌ನಲ್ಲಿ ಪಿಎಂಎಫ್‌ಎಂಇ ಯೋಜನೆಯಡಿ ಕಿರು ಆಹಾರ ಸಂಸ್ಕರಣೆ ಉದ್ಯಮ ಸ್ಥಾಪಿಸಲು ಅವಕಾಶವಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಒಟ್ಟು ₹ 15 ಲಕ್ಷ ಸಬ್ಸಿಡಿ ದೊರೆಯಲಿದೆ. ಇದಕ್ಕಾಗಿ ₹ 206 ಕೋಟಿ ಮೀಸಲಿಡಲಾಗಿದೆ ಎಂದು ವಿವರಿಸಿದರು.

ಕೆಪೆಕ್‌ನಲ್ಲಿ ಈ ವರ್ಷ 5 ಸಾವಿರ ಹೊಸ ಆಹಾರ ಉದ್ಯಮಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಕೃಷಿ ಇಲಾಖೆಯಲ್ಲಿ ಹಲವು ವಿನೂತನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ₹ 8 ಕೋಟಿ ಸಹಾಯಧನದಲ್ಲಿ 40 ನವೋದ್ಯಮಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ರೈತರನ್ನು ಯಾಂತ್ರಿಕವಾಗಿಯೂ ಸಬಲರನ್ನಾಗಿ ಮಾಡಲು ರಾಜ್ಯ ಸರ್ಕಾರ ₹ 900 ಕೋಟಿ ವೆಚ್ಚದಲ್ಲಿ ಈಗಾಗಲೇ ಕೃಷಿ ಯಂತ್ರೋಪಕರಣಗಳು, ₹ 1075 ಕೋಟಿ ವೆಚ್ಚದಲ್ಲಿ ಸೂಕ್ಷ್ಮ ನೀರಾವರಿ ಪರಿಕರಗಳನ್ನು ವಿತರಿಸಿದೆ ಎಂದು ಸಚಿವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಲಾನಯನ ಇಲಾಖೆ ನಿರ್ದೇಶಕರಾದ ಮೊಹಮ್ಮದ ಪರವೇಜ ಬಂಥನಾಳ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್, ನಬಾರ್ಡ್ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ವಿ.ಎನ್. ಶರ್ಮಾ, ಎಸ್‌ಎಲ್‌ಬಿಸಿ ಸಂಯೋಜಕ ಭಾಸ್ಕರ್ ಭಟ್ಟಾಚಾರ್ಯ ಉಪಸ್ಥಿತರಿದ್ದರು.

140ಕ್ಕೂ ಹೆಚ್ಚು ಕಂಪನಿಗಳಿಂದ ಮಳಿಗೆಗಳ ಸ್ಥಾಪನೆ

ಆಹಾರ ತಯಾರಿಕೆ ಸಾಮಗ್ರಿ ಮೇಳ ಆರಂಭ

ಪ್ರಜಾವಾಣಿ ವಾರ್ತೆ



ಆಹಾರ ಮೇಳದಲ್ಲಿರುವ ಬೃಹತ್ ಉಪಕರಣಗಳನ್ನು ಅತಿಥಿಗಳು ವೀಕ್ಷಿಸಿದರು

ಬೆಂಗಳೂರು: ಮೂರು ದಿನಗಳ ಅಂತರ ರಾಷ್ಟ್ರೀಯ ಆಹಾರ ತಯಾರಿಕಾ ಸಾಮಗ್ರಿಗಳ ಬೃಹತ್ ಮೇಳ ಗುರುವಾರ ಬಿಐಇಸಿಯಲ್ಲಿ ಆರಂಭವಾಯಿತು.

ಸ್ವಾವಲಂಬಿ ಭಾರತ ನಿರ್ಮಾಣ, ನವನವೀನ ತಂತ್ರಜ್ಞಾನ ಮೂಲಕ ಕೋಳಿ, ಹಸು ಸಾಕಣೆ, ಸಸ್ಯಾಹಾರ, ಮಾಂಸಾಹಾರ ತಯಾರಿಕೆಯ ದೊಡ್ಡ ಉಪಕರಣಗಳನ್ನು ಪ್ರದರ್ಶಿಸಲಾಗುತ್ತಿದೆ. ಬೃಹತ್ ಮಾರಾಟ ಮೇಳದ ಮೂಲಕ ಉದ್ಯೋಗ ದೊರಕಿಸಿಕೊಡಲು ಆದ್ಯತೆ ನೀಡಲಾಗಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

ಅಖಿಲ ಭಾರತ ವ್ಯಾಪಾರ ಮಂಡಲದ ರಾಜ್ಯ ಘಟಕದ ಅಧ್ಯಕ್ಷ ಕೆ.ವಿ.ವೆಂಕಟೇಶ್, ಕಾಫಿ ಮಂಡಳಿ ಸದಸ್ಯ ವಿಷ್ಣು ಮೀಡಿಯಾ ಡೇ ಮಾರ್ಕೆಟಿಂಗ್ ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಮುದಸ್ಸರ್, ಸಂಯೋಜಕ ರಾಮ್ ಸೋನಲಕ್ಕರ್ ಮೇಳಕ್ಕೆ ಚಾಲನೆ ನೀಡಿದರು.

'ಮೇಳದಲ್ಲಿ 140ಕ್ಕೂ ಹೆಚ್ಚು ಕಂಪನಿಗಳು ಮಳಿಗೆಗಳನ್ನು ತೆರೆದಿವೆ. ಈ ಪೈಕಿ ಟೀ, ಕಾಫಿ ತಯಾರಿಸುವ 30ಕ್ಕೂ ಅಧಿಕ ಮಳಿಗೆಗಳಿವೆ. ಮನುಷ್ಯ ಮಾಡುವ ಕೆಲಸಗಳನ್ನು ಬೃಹತ್ ಯಂತ್ರೋಪಕರಣಗಳು ಸುಲಭವಾಗಿ ಮಾಡುತ್ತಿದ್ದು, ಉದ್ಯಮ ಸ್ಥಾಪಿಸಲು ಬೇಕಾದ ಎಲ್ಲ ಮಾಹಿತಿ, ಸಲಕರಣೆಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗಲಿವೆ' ಎಂದು ಪಿ.ಸಿ. ರಾವ್ ಹೇಳಿದರು.

Prajavani
Pg.3D

ಕಿರು ಆಹಾರ ಸಂಸ್ಕರಣೆ ಉದ್ಯಮ ಸ್ಥಾಪನೆಗೆ ನೆರವು

5 ಸಾವಿರ ಹೊಸ ಆಹಾರ ಉದ್ಯಮಗಳ ಸೃಷ್ಟಿಯ ಗುರಿ

ಸಂ.ಕ.ಸಮಾಚಾರ, ಬೆಂಗಳೂರು

ಕೆಪೆಕ್‌ನಲ್ಲಿ ಪಿಎಂಎಫ್‌ಎಂಇ ಯೋಜನೆಯಡಿ ಕಿರು ಆಹಾರ ಸಂಸ್ಕರಣೆ ಉದ್ಯಮ ಸ್ಥಾಪಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ 15 ಲಕ್ಷ ರೂ.ಗಳ ಸಬ್ಸಿಡಿ ಸಹ ದೊರೆಯಲಿದ್ದು, ರೈತರ ಮಕ್ಕಳು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.



ಕೆಪೆಕ್ ಹಾಗೂ ಖೆತಿವಾಲ ಸಂಸ್ಥೆಗಳ ಸಹಯೋಗದಲ್ಲಿ ಟೌನ್‌ಹಾಲ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಕೃಷಿ ಜಾಗೃತಿ ಕಾರ್ಯಾಗಾರ ಮತ್ತು ಖೆತಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪಿಎಂಎಫ್‌ಎಂಇ ಯೋಜನೆಗೆ 206 ಕೋಟಿ ರೂ. ಮೀಸಲಿಡಲಾಗಿದೆ. ಕೆಪೆಕ್‌ನಲ್ಲಿ ಪ್ರಸಕ್ತ 5 ಸಾವಿರ ಹೊಸ ಆಹಾರ ಉದ್ಯಮಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಇದಲ್ಲದೆ ಕೃಷಿ ಇಲಾಖೆಯಲ್ಲಿಯು ಹಲವು ವಿನೂತನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

ಕೃಷಿ ನವೋದ್ಯಮಕ್ಕಾಗಿ 8 ಕೋಟಿ ರೂ. ಸಹಾಯಧನದಲ್ಲಿ 40 ನವೋದ್ಯಮಗಳ ಸ್ಥಾಪಿಸಲಾಗಿದೆ. 128 ಕೋಟಿ ರೂ. ವೆಚ್ಚದಲ್ಲಿ 344 ಹಾರ್ವೆಸ್ಟರ್ ಹಬ್ ವಿತರಣೆ ಮಾಡಲಾಗಿದೆ. ಕೃಷಿ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ವಹಿವಾಟು ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿದ್ದು, ಯುವ ಜನತೆ ಇದನ್ನು ಸದ್ಬಳಕೆ ಮಾಡಿಕೊಂಡು ನಿರುದ್ಯೋಗ ಮುಕ್ತರಾಗಬೇಕು ಎಂದು ಹೇಳಿದರು.

ಕೆಪೆಕ್ ಕೂಡ ರೈತರ ಉತ್ಪನಗಳ ಮೌಲ್ಯವರ್ಧನೆ, ರಫ್ತು ಹಾಗೂ ಆಹಾರ ಉತ್ಪನಗಳ ತಯಾರಿಕೆ ಉದ್ಯಮದ ಪ್ರೋತ್ಸಾಹಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಆದ್ಯತೆ ನೀಡುತ್ತಿದೆ. ಇದರೊಟ್ಟಿಗೆ ಖೆತಿವಾಲ ಸಂಸ್ಥೆ ಕೆಪೆಕ್ ಫಲಾನುಭವಿಗಳಿಗೆ ದೇಸಿ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಶ್ಲಾಘಿಸಿದರು.

ಇದೇ ವೇಳೆ ಖೆತಿ ಪುರಸ್ಕಾರಕ್ಕೆ ಭಾಜನರಾದ ಅಧಿಕಾರಿಗಳು, ಸಂಸ್ಥೆಯ ಪ್ರತಿನಿಧಿಗಳನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಿದರು.

SamyukthaKannada Pg.06

ಇಂದಿನಿಂದ ವಿವಿಧ ಹಣ್ಣು ಪ್ರದರ್ಶನ ಮೇಳ

ದೇವನಹಳ್ಳಿ: ಜಿಲ್ಲಾಮಟ್ಟದಮಾವು, ಹಲಸುಮತ್ತುಇತರೆಹಣ್ಣುಗಳ ಪ್ರದರ್ಶನ ಹಾಗೂ ಮಾರಾಟ ಮೇಳ-2025 ಕಾರ್ಯಕ್ರಮವನ್ನು ಜೂ.13ರಿಂದ 15ರವರೆಗೆ ತಾಲೂಕಿನ ಹೋಟೆಲ್ ನಂದಿ ಉಪಚಾರ ಮುಂಭಾಗ (ನಂದಿ ಬೆಟ್ಟಕ್ಕೆ ಹೋಗುವ ರಸ್ತೆ, ರಾಣಿ ಕ್ರಾಸ್) ಹಮ್ಮಿಕೊಳ್ಳಲಾಗಿದೆ ಎಂದು ಜಿ ಪಂ ಸಿಇಒ ಡಾ.ಕೆ.ಎನ್ ಅನುರಾಧಾ ತಿಳಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ಮಾವು, ಹಲಸು, ಇತರೆ ಹಣ್ಣು ಬೆಳೆಯುತ್ತಿರುವ ರೈತರಿಗೆ ಉತ್ತಮ ಬೆಲೆ ಕಲ್ಪಿಸಿಕೊಡುವುದು. ಗ್ರಾಹಕರಿಗೆ ಉತ್ತಮ ಗುಣಮಟ್ಟದ ನೈಸರ್ಗಿಕವಾಗಿ ಮಾಗಿಸಿದ ಹಣ್ಣು ಸಿಗುವಂತೆ ಮಾಡಲು ಜಿಲ್ಲಾಡಳಿತ, ಜಿಪಂ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ ಸಹಯೋಗದೊಂದಿಗೆ ಮಾವು ಹಲಸು ಮತ್ತು ಇತರೆ ಹಣ್ಣು ಪ್ರದರ್ಶನ, ಮಾರಾಟ ಮೇಳ-2025 ಅನ್ನು ಹಮ್ಮಿಕೊಳ್ಳಲಾಗಿದೆಂದರು.



ಸಸ್ಯ ಸಂತೆಯಲ್ಲಿ ಕಸಿಗಿಡಗಳ ಪ್ರದರ್ಶನ

ಮೇಳದಲ್ಲಿ ಸಸ್ಯ ಸಂತೆ ಕಾರ್ಯಕ್ರಮವನ್ನು ಏರ್ಪಡಿಸಿದ್ದು ಜಿಲ್ಲೆಯ ಎಲ್ಲಾ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳಿಂದ ವಿವಿಧ ಜಾತಿಯ ಹಣ್ಣಿನ ಕಸಿ, ಸಸಿ ಗಿಡಗಳನ್ನು ಅಲಂಕಾರಿಕ ಗಿಡಗಳನ್ನು ಪ್ರದರ್ಶನಕ್ಕೆ ಹಾಗೂ ಇಲಾಖೆ ನಿಗದಿಪಡಿಸಿದ ದರದಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗುವುದು.

ಇಂದು ಸಚಿವರಿಂದ ಚಾಲನೆ

ಮಾವು ಹಲಸು ಮಾರಾಟ ಮೇಳದ ಉದ್ಘಾಟನೆಯನ್ನು ಜೂನ್ 13ರ ಬೆಳಗ್ಗೆ 11.00 ಗಂಟೆಗೆ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾದ ಕೆ.ಎಚ್ ಮುನಿಯಪ್ಪ ನೇರವೇರಿಸಲಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಇಲಾಖೆ ಸಚಿವ ಎಸ್.ಎಸ್ ಮಲ್ಲಿಕಾರ್ಜುನ, ಶಾಸಕರಾದ ಶರತ್ ಕುಮಾರ್ ಬಚ್ಚೇಗೌಡ ಅವರು ಸಸ್ಯ ಸಂತೆ ಮೇಳದಲ್ಲಿ ಭಾಗವಹಿಸುವರು.

Hosadigantha Pg.08

25 ಸಾವಿರ ರೂ. ಸನಿಹಕ್ಕೆ ಕ್ವಿಂಟಾಲ್ ಕೊಬ್ಬರಿ!

ತುಮಕೂರು: ಕೊಬ್ಬರಿ ಬೆಲೆ ನಾಗಾಲೋಟ ಮುಂದುವರಿದಿದ್ದು, ತಿಪಟೂರು ಮಾರುಕಟ್ಟೆಯಲ್ಲಿ ಗುರುವಾರ ಕ್ವಿಂಟಾಲ್ ಕೊಬ್ಬರಿ 24129 ರೂಪಾಯಿಗೆ ಮಾರಾಟವಾಗುವ ಮೂಲಕ ಹಿಂದಿನ ಎಲ್ಲ ದಾಖಲೆ ಮುರಿಯಿತು. ಮೇ 12ರಂದು 18,244 ರೂ., ಮೇ 26ರಂದು 21,809 ರೂಪಾಯಿಗೆ ತಲುಪಿದ ಕೊಬ್ಬರಿ ಬೆಲೆ ಯಾರೂ ನಿರೀಕ್ಷಿಸದ ರೀತಿಯಲ್ಲಿ ಏರಿಕೆ ಕಾಣುತ್ತಿರುವುದು ತೆಂಗಿನ ಸೀಮೆಯ ಜನರಿಗೆ ಸೋಜಿಗ ಎನಿಸಿದೆ. ವಿಪರ್ಯಾಸ ಎಂಬಂತೆ ಜಿಲ್ಲೆಯಲ್ಲಿ ತೆಂಗು ಇಳುವರಿ ಗಣನೀಯವಾಗಿ ಕಡಿಮೆಯಾಗಿರುವುದು ಕೈಗೆ ಬಂದಿರುವ ತುತ್ತು ಬಾಯಿಗಿಲ್ಲ ಎಂಬಂತಾಗಿದೆ. ಗುರುವಾರ ಮಾರುಕಟ್ಟೆಗೆ 3028 ಕ್ವಿಂಟಾಲ್ ಬಂದಿದ್ದು ಸರಾಸರಿ 23,850 ರೂ. ನಂತೆ ಮಾರಾಟವಾಗಿದೆ. ಕನಿಷ್ಠ ದರ 21,000, ಗರಿಷ್ಠ 24,129 ರೂ. ದಾಖಲಾಗಿದೆ. 25 ಸಾವಿರ ರೂ. ದಾಟಿದರೂ ಆಶ್ಚರ್ಯವಿಲ್ಲ ಎನ್ನುತ್ತಾರೆ ದಲ್ಲಾಳಿಗಳು. ಶ್ರಾವಣದಲ್ಲಿ ಹಬ್ಬಗಳು ಬರಲಿದ್ದು ಉತ್ತರ ಭಾರತದಲ್ಲಿ ರುಚಿಗೆ ಖ್ಯಾತಿಗಳಿಸಿರುವ ತಿಪಟೂರು ಭಾಗದ ಉಂಡೆ ಕೊಬ್ಬರಿಗೆ ಬೇಡಿಕೆ ಹೆಚ್ಚಾಗಲಿದೆ. ಜತೆಗೆ ಪೂರೈಕೆ ಕೂಡ ಕಡಿಮೆಯಾಗಿರುವುದು ಬೆಲೆ ಮತ್ತಷ್ಟು ದಿನ ಸ್ಥಿರವಾಗಿರಲಿದೆ ಎಂಬ ವಿಶ್ವಾಸ ರೈತರಲ್ಲಿದೆ.



Vijayavani Pg.10c

ನಿರುದ್ಯೋಗ ನಿವಾರಣೆಗೆ ಕೃಷಿ ಕ್ಷೇತ್ರ ಆಸರೆ

ಕೃಷಿ ಸಚಿವ ಚಲುವರಾಯಸ್ವಾಮಿ ಅಭಿಮತ | ಕೃಷಿ ಜಾಗೃತಿ ಕಾರ್ಯಾಗಾರ, ಖೇತಿ ಪ್ರಶಸ್ತಿ ಪ್ರದಾನ

ಬೆಂಗಳೂರು: ನಿರುದ್ಯೋಗ ಸಮಸ್ಯೆ ನಿವಾರಣೆಗೆ ಕೃಷಿ ಮತ್ತು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ವ್ಯಾಪಾರ ಕ್ಷೇತ್ರಗಳು ಆಸರೆಯಾಗಿವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ಪುರಭವನದಲ್ಲಿ ಗುರುವಾರ ಕೆಪೆಕ್ ಹಾಗೂ ಖೇತಿವಾಲ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಕೃಷಿ ಜಾಗೃತಿ ಕಾರ್ಯಾಗಾರ ಹಾಗೂ ಖೇತಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕೃಷಿ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ವಹಿವಾಟು ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಜತೆಗೆ ಸ್ವ-ಉದ್ಯೋಗಗಳ ಅವಕಾಶಗಳು ಹೆಚ್ಚುತ್ತಿವೆ. ಯುವ ಸಮುದಾಯ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಆಹಾರ ಸಂಸ್ಕರಣ ಉದ್ಯಮಕ್ಕೆ ಅವಕಾಶ: ಕೆಪೆಕ್‌ನಲ್ಲಿ ಪಿಎಂಎಫ್‌ಎಂಇ ಯೋಜನೆಯಡಿ ಕಿರು ಆಹಾರ ಸಂಸ್ಕರಣ ಉದ್ಯಮ ಸ್ಥಾಪಿಸಲು ಅವಕಾಶವಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಒಟ್ಟು 15 ಲಕ್ಷ ರೂ. ಸಬ್ಸಿಡಿ ಕೂಡ ದೊರೆಯಲಿದೆ. ಇದಕ್ಕಾಗಿ 206 ಕೋಟಿ ರೂ. ಮೀಸಲಿಡಲಾಗಿದೆ. ಈ ಅವಕಾಶವನ್ನು ರೈತರ ಮಕ್ಕಳು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

128 ಕೋಟಿ ರೂ. ವೆಚ್ಚದಲ್ಲಿ 344 ಹಾರ್ವೆಸ್ಟರ್ ಹಬ್ ವಿತರಣೆ ಮಾಡಲಾಗಿದೆ. ರೈತರನ್ನು ಯಾಂತ್ರಿಕವಾಗಿಯೂ ಸಬಲರನ್ನಾಗಿಸಲು ರಾಜ್ಯ ಸರ್ಕಾರ 900 ಕೋಟಿ ರೂ. ವೆಚ್ಚದಲ್ಲಿ ಈಗಾಗಲೇ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗಿದೆ. 1075 ಕೋಟಿ ರೂ. ವೆಚ್ಚದಲ್ಲಿ ಸೂಕ್ಷ್ಮ ನೀರಾವರಿ ಪರಿಕರಗಳನ್ನು ವಿತರಿಸಲಾಗಿದೆ ಎಂದು ಸಚಿವರು ತಿಳಿಸಿದರು.



ಜಲಾಯನ ಇಲಾಖೆ ನಿರ್ದೇಶಕ ಬಂಥನಾಳ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್, ನಬಾರ್ಡ್ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್, ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕ ವಿ.ಎನ್. ಶರ್ಮಾ ಮತ್ತು ಎಸ್.ಎಲ್.ಬಿ.ಸಿ. ಸಂಯೋಜಕ ಭಾಸ್ಕರ್ ಭಟ್ಟಾಚಾರ್ಯ ಮತ್ತಿತರರು ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಪುರಭವನದಲ್ಲಿ ಗುರುವಾರ ಕೆಪೆಕ್ ಹಾಗೂ ಖೇತಿವಾಲ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಜಲಾನಯನ ಇಲಾಖೆ ನಿರ್ದೇಶಕ ಬಂಥನಾಳ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಇದ್ದರು.

Vijayavani
Pg.3c

Economics Times
Pg.14

Inflation Hits 75-month Low of 2.8% in May as Food Prices Cool

Food inflation falls to a 43-month low of 0.99%; rate cut unlikely but demand may improve

Our Bureau

New Delhi: India's retail inflation dropped to a 75-month low of 2.8% year-on-year in May, driven by a steep fall in food prices, data released on Thursday showed. Economists expect it to ease further in June.

The Consumer Price Index (CPI)-based inflation stood at 3.2% in April and 4.8% in May last year. Food inflation, accounting for a significant weight in the inflation basket, fell to a 43-month low of 0.99% in May.

The lower inflation is unlikely to trigger another interest rate cut, but is expected to boost consumer demand for goods and services, experts said. "As of now, we expect rates to be unchanged in the August policy review," said Aditi Nayar, chief economist at ICRA.

Last week, the Reserve Bank of India's monetary policy committee (MPC) delivered a larger-than-expected rate cut of 50 basis points, reducing the policy rate to 5.5%. Additionally, the cash reserve ratio (CRR) is being lowered by 100 basis points to 3% in tranches, which is expected to infuse ₹2.5 lakh crore into the banking system in the coming months.

The MPC also shifted its policy stance to neutral from accommodative, indicating a pause in rate action. "Overall, the change in the policy stance appears to be a strong signal of a pause, especially when combined with the unexpected CRR cut," Nayar said.

However, she noted the possibility of a final 25 bps rate cut in October, contingent on monsoon performance and its impact on food inflation. Paras Jasrai, associate director at India Ratings and Research (Ind-Ra), said, "We expect a 25-bps cut this fiscal, unless there are surprises from global development or growth declines sharply." The central bank has revised its inflation forecast for FY26 downward to 3.7% from 4% estimated in April. Average inflation was 4.6% in FY25.

Inflation in rural areas declined to 2.6% last month from 2.9% in April, while urban inflation fell to 3.1% from 3.4%. "This (fall in inflation) would further amplify the pick-up in the rural demand, which is showing signs of recovery with a sustained positive real rural wage growth," Jasrai said. He added that declining inflation is expected to provide a significant boost to the real wages of the households in FY26.

Out of 22 major states and union territories, 10 reported higher inflation than the national average in May.

On a Downturn

CPI based inflation rose to **4.8%** in **May** from **3.2%** in **April** 2024

RBI revised inflation forecast for **FY26** downward to **3.7%** from **4%** estimated in **Apr**

Falling inflation expected to provide boost to real wages of households in FY26



May retail inflation drops to over 6-year low of 2.82%

DIPAK MONDAL @ New Delhi

LESS than a week after the monetary policy committee (MPC) of the RBI decided to go for a jumbo 50 basis point rate cut, the May retail inflation number has 'justified' the central bank's bold move.

Retail inflation rate in May recorded the lowest year-on-year growth in over six years, as the Consumer Price Index (CPI) rose by just 2.82% during the month, according to the provisional figures released by the National Statistics Office. This is 34 basis points lower than April 2025 inflation of 3.16%, and the lowest reading since February 2019.

Food inflation plunged to a multi-year low of 0.99% in May 2025, down sharply by 79 basis points from 1.78% recorded in the previous month. This is the lowest food inflation recorded since October 2021. Both rural and urban areas saw similar declines, with rural food inflation at 0.95% and urban at 0.96%. The drop in headline and food inflation is attributed mainly to falling prices of pulses, vegetables, fruits, cereals, household goods, sugar, and eggs, as well as a favorable base effect. Vegetable prices declined 13.70% year-on-year during the month, pulses prices fell by 8.22%, and spices by 3%. Meat and fish prices also declined marginally during the month.



Rural headline inflation stood at 2.59% in May 2025, down from 2.92% in April, while urban headline inflation declined to 3.07% from 3.36%. Housing inflation in urban areas was 3.16%, and education and health inflation rates were 4.12% and 4.34%, respectively.

Among other components of the consumer price index -- housing inflation rose by 3.16% during the month compared to 3.06% in April. The housing index is compiled for urban sector only. Education inflation rate for May was 4.12% compared to 4.13% in April. Health inflation rate at 4.34% was higher than 4.25% in April. Transport & communication inflation was 3.85% compared to 3.67% in the previous month. Fuel & light inflation rate fell from 2.92% in April to 2.78% in May.

Indian Express Pg.13

DeccanHerald Pg.08

Siddaramaiah urges AP CM to lift ban on totapuri mangoes

S N V SUDHIR
HYDERABAD, DHNS

Indicating a need to protect farmers' interests, Andhra Pradesh has restricted the entry of totapuri mangoes from Karnataka.

Despite Karnataka Chief Minister Siddaramaiah's appeal to Andhra Pradesh Chief Minister N Chandrababu Naidu, the state government appears to be firm on its decision.

The Andhra Pradesh government claims that farmers from Karnataka were selling their produce for just Rs 5 per kg to processing units in Chittoor and this was undermining the prospects of Andhra farmers.

Sources within the Andhra Pradesh government told *DH* that intervention in the form of a ban on mangoes from Karnataka was warranted. Otherwise, the situation would have led to unrest among Andhra farmers.

On Wednesday, Siddaramaiah wrote to Naidu expressing concern over an order reportedly issued by the District Collector of Chittoor on June 7, which imposed a ban on the entry of Totapuri mangoes from other states into the district.

Multidisciplinary enforcement teams comprising officials from the Revenue, Police, Forest, and Marketing Departments have been deployed at inter-state checkposts adjoining Tamil Nadu and Karnataka to implement this directive. Siddaramaiah argued that such actions, taken without prior consultation or coordination, run contrary to the spirit of co-operative federalism.



He warned that this approach may lead to avoidable tensions and retaliatory measures, noting that stakeholders are already expressing discontent that could potentially disrupt the interstate movement of vegetables and other agricultural commodities.

Mango growers in Karnataka's bordering areas and Chittoor in Andhra Pradesh who cultivate Totapuri mangoes in substantial quantities have long relied on the robust linkages with Chittoor-based processing and pulp extraction units for marketing their produce.

Every year, as a convention, the Andhra Pradesh government announces the price of Totapuri mangoes at which the processors would purchase it.

This year, the government announced a price of Rs 8 per kg. This is the price at which the processor purchases from the farmer to make into pulp. Keeping in mind low prices and higher supplies, the Andhra Pradesh government agreed to supplement the price by Rs 4 per kg. Thus, the farmers' realisation would be reasonable, which would be Rs 12 per kg.

"Procurement is planned for 5.5 lakh tonnes this year. The government would be spending Rs 220 crore on such price augmentation. Karnataka's price is quite low - around Rs 5 per kg. If the Andhra Pradesh government allows Karnataka mangoes to come in, processors would prefer to buy from Karnataka, and Andhra Pradesh farmers would suffer. This would become a major crisis for mango farmers. Karnataka government hasn't announced any price for their farmers and should do so to ensure minimum viability for their farmers," a source in the Andhra Pradesh government told *DH*.